**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ- 24(ಸಿಡಬ್ಲ್ಯೂ-42)**

ಸಾಕ್ಷಿದಾರರ ಹೆಸರು : ರಾಮಚಂದ್ರ ಚೌಧರಿ

ತಂದೆಯ ಹೆಸರು : ಶಂಕರಪ್ಪ

ವಯಸ್ಸು : 47 ವರ್ಷ

ಉದ್ಯೋಗ : ಪೋಲಿಸ್ ನಿರೀಕ್ಷಕರು, ತಲಗಟ್ಟುಪುರ ಪಿಎಸ್, ಬೆಂಗಳೂರು

ವಾಸಸ್ಥಳ : ಬೆಂಗಳೂರು.

**ಸಾಕ್ಷಿಗೆ ಇಂದು ದಿನಾಂಕ :-09/02/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ದಿ: 26.04.2016 ರಿಂದ ದಿ: 25.12.2017 ರವರೆಗೆ ವಿಜಯಪುರ ಗ್ರಾಮೀಣ ಪೋಲಿಸ್ ವೃತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆ ನನ್ನ ಕಾರ್ಯವ್ಯಾಪ್ತಿಯಲ್ಲಿ ಬರುತ್ತಿತ್ತು.

ದಿ: 08.07.2016 ರಂದು ಈ ಪ್ರಕರಣದ ಕಡತವನ್ನು ಚಾಸಾ-41 ರವರಿಂದ ಪಡೆದುಕೊಂಡು, ಪರಿಶೀಲಿಸಿ, ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಅಲ್-ಅಮೀನ ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಭೇಟಿ ನೀಡಿ, ಅಲ್ಲಿ ಮೃತ ಚಂದ್ರಶೇಖರ ತಂದೆ ಫೋಮು ಚವ್ಹಾಣ ಇತನ ಶವ ಪಂಚನಾಮೆಯನ್ನು ಚಾಸಾ-2 & 3 ರವರ ಸಮಕ್ಷಮ ಬೆಳೀಗ್ಗೆ 6.45 ರಿಂದ 7.45 ರವರೆಗೆ ಜರುಗಿಸಿ, ಫೋಟೋಗಳನ್ನು ತೆಗೆಸಿಕೊಂಡಿರುತ್ತೇನೆ. ಶವ ಪಂಚನಾಮೆ ಸಮಯದಲ್ಲಿ ಶವದ ತಲೆಗೆಯ ಹಿಂಭಾಗದಲ್ಲಿ ಭಾರಿ ಹರಿದ ಗಾಯ, ಎಡಕಿವಿಯ ಕುತ್ತಿಗೆಯವರೆಗೆ ಹರಿದ ಗಾಯ, ಎಡ ಹಣೇಯ ಮೇಲೆ, ಕುತ್ತಿಗೆಯ ಮುಂದೆ ಎರಡು ಹರಿತವಾದ ಗಾಯ, ಎಡ ಮುಂಡಿಯಲ್ಲಿ ಹರಿತವಾದ ಗಾಯ, ಎಡ ಮೊಳಕ್ಕೈ ಹತ್ತಿರ, ಎಡಗೈ ಅಂಗೈ ಬೆನ್ನಿನ ಮೇಲೆ ಮೂರು ಗಾಯಗಳು, ಬಲ ಎದೆಯ

ಮೇಲೆ ಚುಚ್ಚಿದ ಗಾಯ, ಎಡಎದೆಯ ಮೇಲೆ ಮೂರು ಕಡೆ ಚುಚ್ಚಿದ ಗಾಯ, ಹೊಕ್ಕಳು ಮೇಲೆ ಗಾಯ ಆಗಿ ಕರುಳು ಹೊರಬಂದಿತ್ತು. ಶವ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.19 ನ್ನು ನೋಡಿ ಗುರುತಿಸುತ್ತಾರೆ.

ನಂತರ ಸಾವಿನ ಕಾರಣ ತಿಳಿಯಲು ಮೃತ ಚಂದ್ರಶೇಖರನ ಶವವನ್ನು ಚಾಸಾ-34 ರವರ ಮೂಲಕ ಮರಣೋತ್ತರ ಪರೀಕ್ಷೆಗಾಗಿ ಮನವಿಯೊಂದಿಗೆ ವೈದ್ಯರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಕಳುಹಿಸಿಕೊಟ್ಟ ನಮೂನೆ 146 ಮತ್ತು ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.27 ಮತ್ತು ನಿ.ಪಿ.28 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ.27(ಎ) ಮತ್ತು ನಿ.ಪಿ.28(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರವರು ತೋರಿಸಿದ ಘಟನಾ ಸ್ಥಳವಾದ ಹಂಚನಾಳ ತಾಂಡಾ ನಂ.1 ರ ಆರೋಪಿತರ ಮನೆಗೆ ಭೇಟಿ ನೀಡಿ, ಮನೆಯ ನಡುವಿನ ಕೋಣೆಯಲ್ಲಿ ನೆಲ ಮತ್ತು ಗೋಡೆಯ ಮೇಲೆ ರಕ್ತ ಚೆಲ್ಲಿದ ಗುರುತುಗಳು ಕಂಡು ಬಂದಿದ್ದು, ಅಲ್ಲಿ ಪಂಚರಾದ ಚಾಸಾ-4 & 5 ರವರ ಸಮಕ್ಷಮ ಪರಿಶೀಲಿಸಿ, ಪಂಚನಾಮೆಯನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ ಗೋಡೆಗೆ ಹತ್ತಿದ್ದ ರಕ್ತವನ್ನು ಕೆತ್ತಿ ತೆಗೆದು ಸಂಗ್ರಹಿಸಿಕೊಂಡಿದ್ದು, ರಕ್ತ ಹತ್ತಲಾರದ

ಗೋಡೆಯ ಮಣ್ಣನ್ನು ಸಹ ಸಂಗ್ರಹಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಖಾರದ ಪುಡಿ ಬಿದ್ದಿದ್ದು, ಅದನ್ನು ಸಂಗ್ರಹಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಬಿದ್ದಿದ್ದ ಮೃತನ ರಿಬಾಕ್ ಕಂಪನಿಯ ನೀಲಿ ಬಣ್ಣದ ಶೂ ಮತ್ತು ಕಪ್ಪು ಬಣ್ಣದ ಸಾಕ್ಸನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸ್ಥಳದಲ್ಲಿ ಬಿದ್ದಿದ್ದ ಒಂದು ಝುಂಬೆ (ಚಾಕು/ಕತ್ತಿ) ನ್ನು ಚಾಸಾ-1 ರವರು 5 ನೇ ಆರೋಪಿಯು ಹಲ್ಲೆ ಮಾಡಲು ಉಪಯೋಗಿಸಿದ್ದು ಎಂದು ತೋರಿಸಿದ್ದು, ಅದನ್ನು ಅಮಾನತ ಪಡೆಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 9.00 ರಿಂದ 10.00 ಗಂಟೆವರೆಗೆ ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ ಮತ್ತು ಫೋಟೋಗಳನ್ನು ತೆಗೆಸಿಕೊಂಡಿರುತ್ತೇನೆ. ಸಾಕ್ಷಿಯು ನಿ.ಪಿ.6 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಫೋಟೋವನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು, ನಿ.ಪಿ.20 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.20(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.29 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.29(ಎ) ಎಂದು ಗುರುತಿಸಲಾಯಿತು. ಅಮಾನತ ಪಡೆಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.1 ರಿಂದ 5 ನ್ನು ನೋಡಿ ಗುರುತಿಸುತ್ತಾರೆ.

ನಂತರ ಚಾಸಾ-12 ರಿಂದ 32 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-34 ರವರು ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಮೃತರ ಸಂಬಂಧಿಕರಿಗೆ ನೀಡಿ, ಮೃತನ ಮೈಮೇಲೆ ಇದ್ದ ಬಟ್ಟೆಗಳನ್ನು ತಂದು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಸದರಿ ಬಟ್ಟೆಗಳನ್ನು ಚಾಸಾ-4 & 5 ರವರ ಸಮಕ್ಷಮ ಮಧ್ಯಾಹ್ನ

12.30 ರಿಂದ 1.30 ರವರೆಗೆ ಠಾಣೆಯಲ್ಲಿ ಪಂಚನಾಮೆ ಜರುಗಿಸಿ, ಅವುಗಳನ್ನು ಅಮಾನತ ಪಡೆಸಿಕೊಂಡು ಠಾಣಾ ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.7 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಮೃತನ ಮೈಮೇಲೆ ಇದ್ದ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ. 6 ರಿಂದ 9 ಮತ್ತು 11 ರಿಂದ 14 ನ್ನು ನೋಡಿ ಗುರುತಿಸುತ್ತಾರೆ.

ದಿ: 11.07.2016 ರಂದು 1, 2 ಮತ್ತು 6 ನೇ ಆರೋಪಿತರು ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಘಟನೆಯ ದಿನ ದಾಖಲಾಗಿದ್ದು, ಅವರು ಚಿಕಿತ್ಸೆ ಪಡೆದುಕೊಂಡು, ಬಿಡುಗಡೆ ಆದ ಕಾರಣ ಅವರನ್ನು ಸಿಪಿಸಿ ನಂ.1567, 638, ಡಬ್ಲೂ ಪಿಸಿ. ನಂ.1403 ರವರು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ತಂದು ಹಾಜರುಪಡೆಸಿದ್ದು, ಅವರಿಗೆ ವಿಚಾರಿಸಿ, ಅವರ ದಸ್ತಗಿರಿ ಕ್ರಮ ಜರುಗಿಸಿ, ಅವರ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಘಟನೆ ಸಮಯದಲ್ಲಿ ಆರೋಪಿತರು ಧರಿಸಿದ್ದ ಬಟ್ಟೆಗಳನ್ನು ನನ್ನ ಮುಂದೆ ಹಾಜರು ಪಡೆಸಿದ್ದು, ಅವುಗಳನ್ನು ಪಂಚರಾದ ಚಾಸಾ-6 & 7 ರವರ ಸಮಕ್ಷಮ ಸಂಜೆ 3.30 ರಿಂದ 4.30 ರವರೆಗೆ ಪಂಚನಾಮೆ ಮಾಡಿ, ಅಮಾನತ ಪಡೆಸಿಕೊಂಡು, ಠಾಣಾ ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಪಂಚನಾಮೆ ಮತ್ತು ಅಮಾನತ ಪಡೆಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.8 ನ್ನು ನೋಡಿ

ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫೋಟೋ ತೆಗೆಸಿಕೊಂಡಿರುತ್ತೇನೆ. ಸಾಕ್ಷಿಯು ನಿ.ಪಿ.21 ನ್ನು ನೋಡಿ ಗುರುತಿಸಿದ್ದು, ಆರೋಪಿ ಪರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.15 ರಿಂದ 19 ನ್ನು ನೋಡಿ ಗುರುತಿಸುತ್ತಾರೆ.

1 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ " ಕೊಲೆ ಮಾಡುವ ಕಾಲಕ್ಕೆ ನಾನು ಉಪಯೋಗಿಸಿದ ಹತ್ಯಾರ ಆ ದಿವಸ ವಿಜಯಪುರಕ್ಕೆ ಬರುವಾಗ ದಾರಿಯಲ್ಲಿ ಒಂದು ಕಡೆ ಮುಚ್ಚಿ ಇಟ್ಟಿದ್ದು, ತಾವು ಜೊತೆಯಲ್ಲಿ ಬಂದರೆ ಅದನ್ನು ತೋರಿಸಿ ಹಾಜರು ಮಾಡುತ್ತೇನೆ" ಎಂದು ಹೇಳಿರುತ್ತಾನೆ. ಹೇಳಿಕೆಯ ಈ ಭಾಗವನ್ನು ನಿ.ಪಿ.30 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿ.ಪಿ.30(ಬಿ) ಎಂದು ಗುರುತಿಸಲಾಯಿತು. ನಂತರ 1 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಮೇರೆಗೆ ಚಾಸಾ-6 & 7 ರವರನ್ನು ಠಾಣೆಗೆ ಕರೆಸಿಕೊಂಡು, ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡು, 1 ನೇ ಆರೋಪಿಯು ನಮ್ಮನ್ನು ಮತ್ತು ಪಂಚರನ್ನು ಕರೆದುಕೊಂಡು ಹಂಚನಾಳ ತಾಂಡಾದ ಕಡೆಗೆ ವಾಹನವನ್ನು ತಿರುಗಿಸಲು ಹೇಳಿದ್ದು, ಜೈನ ಮಂದಿರದ ಹಿಂದೆ ಆವರಣ ಗೋಡೆಯ ಹತ್ತಿರ ವಾಹನವನ್ನು ನಿಲ್ಲಿಸಲು ಹೇಳಿದ್ದು, ಅಲ್ಲಿ ಇಳಿದು 1 ನೇ ಆರೋಪಿಯು ಮುಂದೆ ಹೋಗಿ, ಜೈನ ಮಂದಿರದ ಹಿಂದೆ ಒಂದು ಕಂಟಿ ಮರೆಯಲ್ಲಿ ಮುಚ್ಚಿಟ್ಟಿದ್ದ ಒಂದು ತಲ್ವಾರನ್ನು ತೆಗೆದು ಹಾಜರು

ಪಡೆಸಿದ್ದು, ಅದನ್ನು ಪಂಚರ ಸಮಕ್ಷಮ ಅಮಾನತ ಪಡೆಸಿಕೊಂಡು, ಆ ಸಮಯದಲ್ಲಿ ಫೊಟೋಗಳನ್ನು ತೆಗೆಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಸಂಜೆ 510 ರಿಂದ 6.00 ಗಂಟೆವರೆಗೆ ಜರುಗಿಸಿರುತ್ತೇನೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕಜ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.9 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಬಿ)ಎಂದು ಗುರುತಿಸಲಾಯಿತು. ಫೋಟೋಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ.22 ಮತ್ತು 23 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು. ಅಮಾನತ ಪಡೆಸಿಕೊಂಡ ತಲ್ವಾರನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.10 ನ್ನು ನೋಡಿ ಗುರುತಿಸುತ್ತಾರೆ.

1 ನೇ ಆರೋಪಿಯು ಜನ್ಮ ದಿನಾಂಕವನ್ನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಂಚನಾಳ ಇಲ್ಲಿಂದ ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯು ಬಾಲಾಪರಾಧಿ ಎಂದು ಕಂಡು ಬಂದ ಹಿನ್ನೆಲೆಯಲ್ಲಿ ಅದೇ ದಿನ ಆತನನ್ನು ಬಾಲ ನ್ಯಾಯಾಲಯದ ಮುಂದೆ ಹಾಜರು ಪಡೆಸಿರುತ್ತೇನೆ. ಆತನ ಜನ್ಮ ದಿನಾಂಕ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಜನ್ಮ ದಿನಾಂಕ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.31 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು.

ದಿ: 18.07.2016 ರಂದು 4 ನೇ ಆರೋಪಿತನನ್ನು ನಮ್ಮ ಠಾಣಾ ಸಿಬ್ಬಂದಿಗಳು ವಶಕ್ಕೆ ಪಡೆದುಕೊಂಡು ಬಂದು ನನ್ನ ಮುಂದೆ ಹಾಜರು ಪಡೆಸಿದ್ದು, ಆತನನ್ನು ವಿಚಾರಿಸಿ, ದಸ್ತಗಿರಿ ಕ್ರಮ ಜರುಗಿಸಿ, ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. 4 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ "ಘಟನೆ ಕಾಲಕ್ಕೆ ನಾನು ತೊಟ್ಟುಕೊಂಡಿದ್ದ ರಕ್ತ ಹತ್ತಿದ್ದ ಬಟ್ಟೆಗಳನ್ನು ಆ ದಿವಸ ವಿಜಯಪುರಕ್ಕೆ ಬರುವಾಗ ದಾರಿಯಲ್ಲಿ ಒಂದು ಕಡೆ ಮುಚ್ಚಿಟ್ಟು, ಈಗ ತಾವು ಜೊತೆಯಲ್ಲಿ ಬಂದರೆ ಅದನ್ನು ತೋರಿಸಿ, ಹಾಜರು ಮಾಡುತ್ತೇನೆ" ಎಂದು ಹೇಳಿರುತ್ತಾನೆ. ಹೇಳಿಕೆಯ ಈ ಭಾಗವನ್ನು ನಿ.ಪಿ.32 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.32(ಎ) ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿ.ಪಿ.32(ಬಿ) ಎಂದು ಗುರುತಿಸಲಾಯಿತು. ಪಂಚರಾದ ಚಾಸಾ-8 ಮತ್ತು 9 ರವರನ್ನು ಠಾಣೆಗೆ ಕರೆಸಿಕೊಂಡು, ಪಂಚರಾಗಿ ಸಹಕರಿಸುವಂತೆ ಕೊರಿಕೊಂಡಿರುತ್ತೇನೆ. ನಂತರ 4 ನೇ ಆರೋಪಿಯು ನಮ್ಮನ್ನು ಮತ್ತು ಪಂಚರನ್ನು ಕರೆದುಕೊಂಡು ರಾಷ್ಟ್ರೀಯ ಹೆದ್ದಾರಿ-13 ರಲ್ಲಿ ನಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿ ಹಂಚನಾಳ ತಾಂಡಾದ ಕಡೆಗೆ ಹೊರಟಾಗ ಜೈನ ಮಂದಿರದ ಹತ್ತಿರ ನಿಲ್ಲಿಸಲು ಹೇಳಿ, 4 ನೇ ಆರೋಪಿಯು ವಾಹನದಿಂದ ಇಳಿದು ಮುಂದೆ ಹೋಗಿ, ಒಂದು ಸಿಡಿ ಪೂಲ ಕೆಳಗಡೆ ಕೈಹಾಕಿ ಬಟ್ಟೆಗಳನ್ನು ತೆಗೆದು ಹಾಜರುಪಡೆಸಿದ್ದು, ಅದರಲ್ಲಿ ಒಂದು ಚಾಕಲೇಟ ಬಣ್ಣದ ಟೀ-ಶರ್ಟ ರಕ್ತ ಹತ್ತಿದ್ದು ಮತ್ತು ನೀಲಿ ಬಣ್ಣದ ಜಿನ್ಸ ಪ್ಯಾಂಟ ರಕ್ತ ಹತ್ತಿದ್ದು, ಅವುಗಳನ್ನು ಪಂಚರ ಸಮಕ್ಷಮ ಅಮಾನತ ಪಡೆಸಿಕೊಂಡು ಸಂಜೆ 5.30 ರಿಂದ 6.00 ಗಂಟೆವರೆಗೆ ಪಂಚನಾಮೆ ಮಾಡಿರುತ್ತೇನೆ. ಆ ಸಮಯದಲ್ಲಿ ಒಂದು ಪೊಟೋ ತೆಗೆಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ

ನಿ.ಪಿ.10 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಸಿ) ಎಂದು ಗುರುತಿಸಲಾಯಿತು. ಫೋಟೋವನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಈಗಾಗಲೇ ನಿ.ಪಿ.11 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಅಮಾನತ ಪಡೆಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಎರಡು ಮೊಹರು ಮಾಡಿದ ಚೀಲದಲ್ಲಿದ್ದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಮೊಹರು ಸುಸ್ಥಿತಿಯಲ್ಲಿ ಇದ್ದು, ಚೀಲವನ್ನು ತೆರೆಯಲು ಅನುಮತಿಸಲಾಯಿತು). ಸಾಕ್ಷಿಯು ಅದರೊಳಗಡೆ ಇರುವ ಒಂದು ಚಾಕಲೇಟ ಬಣ್ಣದ ಟೀ ಶರ್ಟ ಮತ್ತು ನೀಲಿ ಬಣ್ಣದ ಜೆನ್ಸ ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.20 ಮತ್ತು 21 ಎಂದು ಗುರುತಿಸಲಾಯಿತು. ಅದೇ ದಿನ 4 ನೇ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ನ್ಯಾಯಾಂಗ ಬಂಧನದ ಅರ್ಜಿಯೊಂದಿಗೆ ಹಾಜರು ಪಡೆಸಿರುತ್ತೇನೆ.

ದಿ: 19.07.2016 ರಂದು 1 ನೇ ಆರೋಪಿಯ ವಯಸ್ಸಿನ ಬಗ್ಗೆ ಸಂಶಯವಿದ್ದು, ಆತನ ವೈದ್ಯಕೀಯ ತಪಾಸಣೆ ಮಾಡಲು ಅನುಮತಿಯನ್ನು ಕೋರಿ ಬಾಲ ನ್ಯಾಯಮಂಡಳಿಯಲ್ಲಿ ಮನವಿಯನ್ನು ಸಲ್ಲಿಸಿರುತ್ತೇನೆ. ಆದರೆ ಮಾನ್ಯ ನ್ಯಾಯ ಮಂಡಳಿ ನಮ್ಮ ಅರ್ಜಿಯ ಮೇಲೆ ಯಾವುದೇ ಆದೇಶವನ್ನು ಮಾಡಿರುವುದಿಲ್ಲ.

ದಿ: 29.07.2016 ರಂದು 1 ನೇ ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ವಿಜಯಪುರ ಜಿಲ್ಲಾ ಆಸ್ಪತ್ರೆಯಿಂದ ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.16 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.16(ಬಿ) ಎಂದು ಗುರುತಿಸಲಾಯಿತು. ದಿ: 10.08.2016 ರಂದು ಘಟನೆ ನಡೆದ ಮನೆಯ ಉತಾರವನ್ನು ಪೂರೈಸುವಂತೆ ಗ್ರಾಮಲೆಕ್ಕಾಧಿಕಾರಿ ಬರಟಗಿಯವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ.

ಆ ಸಮಯದಲ್ಲಿ 3 & 5 ನೇ ಆರೋಪಿತರು ಮಾನ್ಯ ನ್ಯಾಯಾಲಯಕ್ಕೆ ಶರಣಾಗಿದ್ದು, ದಿ:17.08.2016 ರಂದು ಅವರನ್ನು ಪೋಲಿಸ್ ಕಸ್ಟಡಿಗೆ ತನಿಖೆಗಾಗಿ ಪಡೆದುಕೊಂಡಿರುತ್ತೇನೆ. 3 ಮತ್ತು 5 ನೇ ಆರೋಪಿತರ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. 3 & 5 ನೇ ಆರೋಪಿತರು ಘಟನೆ ಸಮಯದಲ್ಲಿ ಧರಿಸಿದ್ದ ಬಟ್ಟೆಗಳಿಗೆ ರಕ್ತ ಹತ್ತಿದ್ದು, ಅವುಗಳನ್ನು ಜೊತೆಯಲ್ಲಿ ಬಂದರೆ ತೆಗೆದು ಹಾಜರು ಮಾಡುತ್ತೇವೆ ಎಂದು ಹೇಳಿರುತ್ತಾರೆ. ಹೇಳಿಕೆಯ ಈ ಭಾಗವನ್ನು ನಿ.ಪಿ.33 ಮತ್ತು ನಿ.ಪಿ.34 ಎಂದು, ಸಾಕ್ಷಿಯ ಮತ್ತು ಆರೋಪಿತರ ಸಹಿಗಳನ್ನು ನಿ.ಪಿ.33(ಎ), 33(ಬಿ), 34(ಎ) ಮತ್ತು 34(ಬಿ) ಎಂದು ಗುರುತಿಸಲಾಯಿತು. ನಂತರ ಚಾಸಾ-10 & ಚಾಸಾ-11 ರವರನ್ನು ಠಾಣೆಗೆ ಕರೆಸಿ, 3 & 5 ನೇ ಆರೋಪಿತರು ತಮ್ಮ ಸ್ವ -ಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ವಸ್ತುಗಳನ್ನು ಹಾಜರು ಪಡೆಸುಯವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು, ಸದರಿಯವರು ಒಪ್ಪಿಕೊಂಡಿರುತ್ತಾರೆ. ನಂತರ ಆರೋಪಿತರನ್ನು ಮತ್ತು

ಪಂಚರನ್ನು ಕರೆದುಕೊಂಡು ನಾನು ಸಿಬ್ಬಂದಿ ಜೊತೆ ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟಿದ್ದು, ಆರೋಪಿತರು ನಮ್ಮನ್ನು ಹಂಚನಾಳ ತಾಂಡಾ ದಾಟಿ ಬೋಜು ಜೇಮಲು ರಾಠೋಡ ಎನ್ನುವವರ ಜಮೀನಿನ ಹತ್ತಿರ ನಿಲ್ಲಿಸಲು ಹೇಳಿ, ಆರೋಪಿತರು ಇಳಿದು ಮುಂದೆ ಮುಂದೆ ಹೋಗಿ, ಒಂದು ಕಂಟಿ ಮರೆಯಲ್ಲಿ ಇಟ್ಟಿದ್ದ ಒಂದು ಬಿಳಿ ಬಣ್ಣದ ತುಂಬು ತೋಳಿನ ಅಂಗಿ ಮತ್ತು ನೀಲಿ ಬಣ್ಣದ ಜೀನ್ಸ ಪ್ಯಾಂಟನ್ನು, ಅಲ್ಲಲ್ಲಿ ರಕ್ತ ಹತ್ತಿದ್ದು, 3 ನೇ ಆರೋಪಿಯು ತೆಗೆದು ಹಾಜರು ಪಡಿಸಿರುತ್ತಾನೆ. 5 ನೇ ಆರೋಪಿಯು ಪಕ್ಕದ ಇನ್ನೊಂದು ಕಂಟಿಯ ಮರೆಯಲ್ಲಿ ಇಟ್ಟಿದ್ದ ಕಪ್ಪು ಬಣ್ಣದ ತುಂಬು ತೋಳಿನ ಅಂಗಿ ಮತ್ತು ನೀಲಿ ಬಣ್ಣದ ಜಿನ್ಸ ಪ್ಯಂಟನ್ನು ಹಾಜರು ಪಡಿಸಿದ್ದು, ಅದನ್ನುಪಂಚರ ಸಮಕ್ಷಮ ಸಂಜೆ 3.00 ರಿಂದ 3.45 ರವರೆಗೆ ಪಂಚನಾಮೆ ಜರುಗಿಸಿ, ಅಮಾನತ ಪಡೆಸಿಕೊಂಡಿರುತ್ತೇನೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿ.ಪಿ.26 ಎಂದು ಗುರುತಿಸಿದದು, ಸಾಕ್ಷಿಯ ಸಹಿಯನ್ನು ನಿ.ಪಿ.26(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋಗಳನ್ನು ತೆಗೆಸಿಕೊಂಡಿರುತ್ತೇನೆ. ಸಾಕ್ಷಿಯು ನಿ.ಪಿ.24 & 25 ನ್ನು ನೋಡಿ ಗುರುತಿಸಿದ್ದು, ಆರೋಪಿತರ ತಕರಾರಿಗೆ ಒಳಪಟ್ಟು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು. ಅಮಾನತ ಪಡೆಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ನಾಲ್ಕು ಮೊಹರು ಮಾಡಿದ ಚೀಲದಲ್ಲಿದ್ದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಮೊಹರು ಸುಸ್ಥಿತಿಯಲ್ಲಿ ಇದ್ದು, ಚೀಲವನ್ನು ತೆರೆಯಲು ಅನುಮತಿಸಲಾಯಿತು).

ಅದರೊಳಗಡೆ ಇರುವ ಬಿಳಿ ಬಣ್ಣದ ತುಂಬು ತೋಳಿನ ಶರ್ಟ, ನೀಲಿ ಬಣ್ಣದ ಜೆನ್ಸ ಪ್ಯಾಂಟ, ಕಪ್ಪು ಬಣ್ಣದ ತುಂಬು ತೋಳಿನ ಅಂಗಿ, ಮತ್ತು ನೀಲಿ ಬಣ್ಣದ ಜೆನ್ಸ ಪ್ಯಾಂಟಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.22 ರಿಂದ 25 ಎಂದು ಗುರುತಿಸಲಾಯಿತು. ಅದೇ ದಿನ 3 & 5 ನೇ ಆರೋಪಿತರನ್ನು ನ್ಯಾಯಾಂಗ ಬಂಧನದ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ದಿ: 20.08.2016 ರಂದು ಅಮಾನತ ಪಡಿಸಿಕೊಂಡಿದ್ದ ಝುಂಬೆ(ಚಾಕು) ಮತ್ತು ಹತ್ಯಾರ(ತಲ್ವಾರ) ದಿಂದ ಮೃತನ ಮೈಮೇಲೆ ಕಂಡು ಬಂದ ಗಾಯಗಳು ಆ ರೀತಿಯ ಆಯುಧದಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆಯೇ ಎಂದು ಅಭಿಪ್ರಾಯ ಕೋರಿ ಪತ್ರ ಮುಖೇನ ಕೇಳಿಕೊಂಡಿರುತ್ತೇನೆ. ದಿ: 06.09.2016 ರಂದು ಮೃತನ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.35 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.35(ಎ) ಎಂದು ಗುರುತಿಸಲಾಯಿತು.

ದಿ:19.09.2016 ರಂದು ಪ್ರಕರಣದಲ್ಲಿ ಅಮಾನತ ಪಡೆಸಿಕೊಂಡ ಮುದ್ದೆಮಾಲುಗಳನ್ನು ಚಾಸಾ-35 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ಪ್ರಾದೇಶಿಕ ರಾಸಾಯನಿಕ ಪ್ರಯೋಗಾಲಯ, ಬೆಳಗಾವಿ ಇಲ್ಲಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿ: 20.09.2016 ರಂದು ಚಾಸಾ-36 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ದಿ: 25.09.2016 ರಂದು ಚಾಸಾ-34 ಮತ್ತು ಚಾಸಾ-35 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿ: 29.09.2016 ರಂದು 1 ನೇ ಆರೋಪಿಯ ಜನನ ಪ್ರಮಾಣ ಪತ್ರವನ್ನು ನಿಡುವಂತೆ ಮಾನ್ಯ ತಹಶೀಲ್ದಾರ ವಿಜಯಪುರ ಇವರಿಗೆ ಮನವಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ 1 ನೇ ಆರೋಪಿಯ ಜನನ ಪ್ರಮಾಣ ಪತ್ರವನ್ನು ಚಾಸಾ-39 ರವರಿಂದ ಪಡೆದುಕೊಂಡು,ಕಡತಕ್ಕ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.18 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.18(ಬಿ) ಎಂದು ಗುರುತಿಸಲಾಯಿತು. ಅದೇದಿನ ಚಾಸಾ-39 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ಅದೇ ದಿನ ಮಾನ್ಯ 4 ನೇ ಹೆಚ್ಚುವರಿ ಸಿವಿಲ ಮತ್ತು ಜೆಎಂ.ಎಫ್. ಸಿ ನ್ಯಾಯಾಲಯಕ್ಕೆ 1 ನೇ ಆರೋಪಿ ವಯಸ್ಕನಾಗಿದ್ದು, ಆತನ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲು ಅನುಮತಿಯನ್ನು ಕೇಳಿರುತ್ತೇನೆ. ನಂತರ ಘಟನಾ ಸ್ಥಳದ ನಕಾಶೆಯನ್ನು ಮತ್ತು ಮನೆಯ ಉತಾರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಕಾಶೆ ಮತ್ತು ಉತಾರವನ್ನು ಸಾಕ್ಷಿ ನೊಡಿ ಗುರುತಿಸಿದ್ದು, ನಕಾಶೆಯನ್ನು ಈಗಾಗಲೇ ನಿ.ಪಿ.13 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ13(ಸಿ) ಎಂದು ಗುರುತಿಸಲಾಯಿತು. ಉತಾರವನ್ನು ನಿ.ಪಿ.36 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು. ಅದೇ ದಿನ ಅಲ್ ಅಮೀನ ವೈದ್ಯಕೀಯ ಕಾಲೇಜ ವೈದ್ಯರಿಂದ ಆಯುಧಗಳನ್ನು ಪರೀಕ್ಷಿಸಿ ನೀಡಿದ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು,

ಅದನ್ನು ನಿ.ಪಿ.37 ಎಂದು ಗುರುತಿಸಲಾಯಿತು. ಅದೇ ದಿನ 2 ಮತ್ತು 6 ನೇ ಆರೋಪಿತರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ. 15 ಮತ್ತು ನಿ.ಪಿ.17 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ.15(ಬಿ) ಮತ್ತು ನಿ.ಪಿ.17(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳದ ಮತ್ತು ವಸ್ತುಗಳನ್ನು ಅಮಾನತ ಪಡೆಸಿಕೊಳ್ಳುವ ಸಮಯದಲ್ಲಿ ಫೋಟೋಗಳನ್ನು ತೆಗೆದ ಬಗ್ಗೆ ಚಾಸಾ-33 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ, ರಾಸಾಯನಿಕ ಪರೀಕ್ಷಾ ವರದಿಯನ್ನು ಕಾಯ್ದಿರಿಸಿ, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

( ಈ ಹಂತದಲ್ಲಿ ಕಡತದಲ್ಲಿ ರಾಸಾಯನಿಕ ಪರೀಕ್ಷಾ ವರದಿ ಕಂಡು ಬರದ ಕಾರಣ, ಮಾನ್ಯ ಸರಕಾರಿ ಅಭಿಯೋಜಕರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು. )

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.